**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಎಸ್.ಸಿ.ನಂಃ 10007/2023**

**ಚಾಸಾ ಃ 46**

**ಪ್ರಾಸಾ ಃ 17**

| | |
|---|---|
| **ಹೆಸರು** | ಃ ಭರತ್. ಬಿ |
| **ತಂದೆಯ ಹೆಸರು** | ಃ ಬಸವರಾಜಯ್ಯ |
| **ವಯಸ್ಸು** | ಃ **44** ವರ್ಷ |
| **ವೃತ್ತಿ** | ಃ ಪಿ.ಐ ಹೈಗ್ರೌಂಡ್ ಪೋಲಿಸ್ ಠಾಣೆ, ಬೆಂಗಳೂರು ನಗರ |
| **ವಾಸ** | ಃ ವಸಂತ ನಗರ, ಬೆಂಗಳೂರು |

**ಈ ದಿನ ದಿನಾಂಕಃ 19.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ ಃ**

ರಾಜಾನುಕುಂಟೇ ಪೋಲಿಸ್ ಠಾಣೆಯಲ್ಲಿ ಜೂನ್ 2022 ರಿಂದ ಆಗಸ್ಟ್ 2023 ರ ವರೆಗೆ ಪಿ ಐ ಕರ್ತವ್ಯ ನಿರ್ವಹಿಸುತ್ತಿದೆ.

**1.** ದಿನಾಂಕಃ **17.01.2023** ರಂದು ನಾನು ಠಾಣಾ ಕರ್ತವ್ಯದಲ್ಲಿದ್ದ ಸಮಯದಲ್ಲಿ ಸಂಜೆ **5–10** ರ ಪಡೆದು ಅದನ್ನು ನಮ್ಮ ಠಾಣಾ ಮೊಕ್ಕದ್ದಮೆ ಸಂಖ್ಯೆ 148/2011 ರಲ್ಲಿ ನೊಂದಾಯಿಸಿ ಮೂಲ ದೂರನ್ನು ಪ್ರ. ವರ್ತಮಾನ ವರದಿಯೊಂದಿಗೆ ನ್ಯಾ.ಕ್ಕೆ ಸಿಬ್ಬಂದಿ ಮುಖಾಂತರ ಕಳುಹಿಸಿಕೊಟ್ಟು ನಕಲುಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಸದರಿ ಪಿರ್ಯಾದುದಾರರು ನೀಡಿದ್ದ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ **1** ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸಿರುತ್ತೇನೆ. ಸಾಕ್ಷಿದಾರರು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ **1**(ಬಿ ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ **41** ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನಿಪಿ–**41**(ಎ) ಎಂದು ಗುರುತಿಸಲಾಯಿತು. ತನಿಖೆಯನ್ನು ಮುಂದುವರೆಸಿ ಸ್ಥಳಕ್ಕೆ ಎಫ್ ಎಸ್ ಎಲ್ ಮತ್ತು ಶ್ವಾನ ದಳ ತಜ್ಞರು ಇವರನ್ನು ಕರೆಯಿಸಿಕೊಂಡು, ಮಹಜರ್ ಸಲುವಾಗಿ ಸಿಬ್ಬಂದಿಯ ಮುಖಾಂತರ ಪಂಚರನ್ನು ಅರೆಕರೆ ಗ್ರಾಮ ಪಂಚಾಯಿತಿ ಪಿ ಡಿ ಓ ರವರಿಗೆ ಕಾಗದ ಕೊಟ್ಟಿದ್ದು, ಅವರು ಸಿಬ್ಬಂದಿ ನೇಮಕ

ಮಾಡಿಕೊಟ್ಟಿದ್ದು, ಅವರು ಚಾಸ–**5** ಮತ್ತು **6** ರವರು ಬಂದ ನಂತರ ಸದರಿಯವರಿಗೆ ನಿಪಿ–**33** ರಂತೆ ನೋಟಿಸ್ ಜಾರಿ ಮಾಡಿರುತ್ತೇನೆ. ಸದರಿ ನೋಟಿಸ್‌ನಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**33**(ಬಿ) ಎಂದು ಗುರುತಿಸಲಾಗಿದೆ. ನಂತರ ನಾವೆಲ್ಲರೂ ಸ್ಥಳಕ್ಕೆ ಬೇಟಿ ನೀಡಿ. ಚಾಸ–**5** ಮತ್ತು **6** ರವರ ಸಮಕ್ಷಮ ಚಾಸ–**1** ರವರು ತೋರಿಸಿದ ಸ್ಥಳವನ್ನು ಪರಿಶೀಲಿಸಿ ಎಫ್ ಎಸ್ ಎಲ್ ಅಧಿಕಾರಿಗಳು ಸ್ಥಳದಲ್ಲಿ ಲಭ್ಯವಿರುವ ಸಾದ ಮಣ್ಣು ಮು ಮಾ **5** ಎಂದು, ರಕ್ತಸಿಕ್ತ ಮಣ್ಣು, ಮು ಮಾ **1** ಎಂದು, ಮೃತ ದೇಹದ ಕತ್ತಿನ ಮೇಲೆ ಇದ್ದ ರಕ್ತದ ಕಲೆಯನ್ನು ಹತ್ತಿಯಲ್ಲಿ ಶೇಖರಿಸಿಕೊಂಡು. ಮು ಮಾ **2** ಮೃತ ದೇಹದಿಂದ ಹರಿದು ಬಂದ ಮಣ್ಣು ಅದರ ಮೇಲೆ ಇದ್ದ ರಕ್ತದ ಕಲೆಯನ್ನು **2** ಬಾರಿ ಶೇಖರಿಸಿಕೊಂಡು ಮು ಮಾ **3** ರಿಂದ **4** ಎಂದು , ರೀಯಲ್ ಬ್ಲೂಟೂತ್ ಬಣ್ಣದ ಇಯರ್ ಬಡ್ ಮು ಮಾ **25** ಎಂದು, ಏರ್ ಟೇಲ್ ಸೀಮ್ ಕಾರ್ಡ್ ಮು ಮಾ **25**(ಎ) ಎಂದು, ಮೃತ ದೇಹದಿಂದ ರಕ್ತ ಮಣ್ಣು ಮತ್ತು ಕಲ್ಲುಗಳ ಮೇಲೆ ಹರಿದಿದ್ದು, ಅದರ ಮಾದರಿಯನ್ನು ಶೇಖರಿಸಿದ್ದು ಮು ಮಾ **6** ಎಂದು, ಜೆಲ್ಲಿ ಕಲ್ಲುಗಳ ಮೇಲೆ ರಕ್ತ ಹರಿದಿದ್ದು, ರಕ್ತ ಶೇಖರಿಸಿದ್ದು, ಮು ಮಾ **13** ಎಂದು, ಮಾದರಿ ಮಣ್ಣು ಮು ಮಾ **8** ಎಂದು, ಜೆಲ್ಲಿ ಕಲ್ಲು ಮತ್ತು ಮಣ್ಣುನ ಮೇಲೆ ಹರಿದಿದ್ದ ರಕ್ತದ ಕಲೆ ಮು ಮಾ **7** ಎಂದು, ರಕ್ತದ ಕಲೆ ಆದ ಚಾಕು ಮು ಮಾ **9** ಎಂದು, ರಕ್ತದ ಕಲೆ ಆದ ಕೂಡುಗೋಲು ಮ ಮಾ **10** ಎಂದು, ಒಂದು ಬಿಳಿಯ ಬಣ್ಣದ ಬ್ಲೂಟೂತ್ ಇಯರ್ ಬಡ್ ರಕ್ತ ಕಲೆ ಆಗಿದ್ದು, ಮು ಮಾ **11** ಎಂದು, ಕೈ ಕಟ್ಟಿಕೊಳ್ಳು ಕೆಂಪು ಬಣ್ಣದ ಮಿಶ್ರಿತ ಮು ಮಾ **26** ಎಂದು, ಒಂದು ಜೊತೆ ರಕ್ತ ಕಲೆ ಆದ ಮು ಮಾ **12** ಎಂದು ಇವುಗಳನ್ನು ಶೇಖರಿಸಿಕೊಂಡು ಪ್ರತ್ಯೇಕವಾಗಿ ಒಂದೊಂದು ಬಾಕ್ಸ್ ನಲ್ಲಿ ಹಾಕಿ ಶೀಲ್ ಮಾಡಿ ನಿಪಿ–**2** ರಂತೆ ಮಹಜರ್ ನ್ನು ಸಂಜೆ **7–00** ರಿಂದ ರಾತ್ರಿ **10–00** ಗಂಟೆಗೆ ವರೆಗೆ ಕೃತಕ ಲೈಟ್ ವ್ಯವಸ್ಥೆಯೊಂದಿಗೆ ಮಹಜರ್ ಕ್ರಮ ಜರುಗಿಸಿ ಪೋಟೋ ತೆಗೆಯ ಲಾಗಿರುತ್ತದೆ. ನಿಪಿ–**2** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**2**(ಸಿ) ಎಂದು ಗುರುತಿಸಲಾಗಿದೆ. ಸದರಿ ಮಹಜರ್ ನ್ನು ಚಾಸ–**43** ರವರು ಬೆರಳಚ್ಚು ಮಾಡಿರುತ್ತಾರೆ. ಸದರಿಯವರ ಸಹಿಯನ್ನು ನಿಪಿ–**2**(ಡಿ) ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ತೆಗೆದಂತಹ ಪೋಟೋಗಳು ನಿಪಿ–**21** ಮತ್ತು **22** ಆಗಿರುತ್ತದೆ. ಮೇಲ್ಕಂಡ ಮು ಮಾ ಗಳ ಮೇಲೆ ಸಾಕ್ಷಿಯ ಸಹಿಯನ್ನು ಮು ಮಾ **1**(ಎ) ರಿಂದ **5**(ಎ), **25**(ಬಿ) **6**ಎ, **13**ಎ, **7**ಎ **8**(ಎ), **9**(ಎ), **10**(ಎ) **11** (ಎ) , **26** (ಎ), **12** ಎ ಎಂದು ಗುರುತಿಸಲಾಗಿದೆ. ಅವುಗಳ ಮೇಲೆ ಪಂಚರ ಸಹಿಗಳನ್ನು ಮಾಡಿಸಲಾಗಿದೆ. ನಂತರ ಮೃತ ದೇಹವನ್ನು ಯಲಹಂಕ ಆಸ್ಪತ್ರೆಗೆ ಸಿಬ್ಬಂದಿ ಮುಖಾಂತರ ಕಳುಹಿಸಿಕೊಡಲಾಯಿತು. ಠಾಣೆಗೆ ಮರಳಿ ಮು ಮಾ ಗಳನ್ನು ಪಿ ಎಫ್ ನಂಬರ್ **11/2023** ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ನಿಪಿ–**20** ರಂತೆ ಎಫ್ ಎಸ್ ಎಲ್ ಅಧಿಕಾರಿ ಸ್ವೀಕೃತಿಯನ್ನು ನೀಡಿದ್ದು, ನಿಪಿ–**20** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**20**(ಎ) ಎಂದು ಗುರುತಿಸಲಾಗಿದೆ.

**2.** ಅದೇ ದಿವಸ ಆರೋಪಿ ಪತ್ತೆಗಾಗಿ ಚಾಸ–**35** ಹಾಗೂ **37** ರವರುಗಳು ಆರೋಪಿಯನ್ನು ರಾತ್ರಿ **11–00** ಗಂಟೆಗೆ ಕರೆ ತಂದು ನನ್ನ ಮುಂದೆ ವರದಿಯೊಂದಿಗೆ ಹಾಜರುಪಡಸಿರುತ್ತಾರೆ. ನಿಪಿ–**13** ವರದಿಯಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**13**(ಎ), ಚಾಸ–**37** ರವರ ಸಹಿಯನ್ನು ನಿಪಿ–**13**(ಬಿ) ಎಂದು ಗುರುತಿಸಲಾಗಿದೆ. ಸದರಿ ಆರೋಪಿ ವಿ.ಸಿ ಮುಖಾಂತರ ಹಾಜರುಪಡಿಸಿದ್ದು, ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿಯವರನ್ನು ವಿಚಾರಣೆ ಒಳಪಡಿಸಿ ಸ್ವ ಇಚ್ಛೆ ಹೇಳಿಕೆ ಪಡೆದುಕೊಂಡಿದ್ದು, ಮರು ದಿವಸ ಠಾಣೆಯ ಅವರಣದಲ್ಲಿ ಚಾಸ–**9** ಹಾಗೂ **10** ರವರನ್ನು ಹಾಜರುಪಡಿಸಿಕೊಂಡು ಅವರಿಗೆ ನೋಟಿಸ್ ಜಾರಿ ಮಾಡಿ ಆರೋಪಿ ವಶದಲ್ಲಿಂತಹ ಆತನ ವಿವೋ ಕಂಪನಿಯ ಮೊಬೈಲ್ ಪೋನ್– ಮು ಮಾ **14** ಮತ್ತು ಮೃತಳ ವಿವೋ ಕಂಪನಿಯ **1935** ಮೊಬೈಲ್ ಪೋನ್ ಮು ಮಾ **15** ಎಂದು, ಒಂದು ತುಂಬು ತೋಳಿನ ಮೃತನ ಟಿ ಶರ್ಟ್ ಮು ಮಾ **16** ಎಂದು, ಮೃತನ ಒಂದು ಕಪ್ಪು ಬಣ್ಣದ ರಕ್ತ ಕಲೆ ಆದ ಪ್ಯಾಂಟ್ ಮು ಮಾ **17** ಎಂದು, ಹೊಂಡಾ ಆ್ಯಕ್ಟಿವಾ ಸಂಖ್ಯೆ ಕೆಎ–**50**–ಇಡಿ–**3303** ರ ವಾಹನವನ್ನು ಆರೋಪಿ ಕೃತ್ಯ ಬಳಸಿದ್ದು, ಇವುಗಳನ್ನು ಠಾಣಾ ಅವರಣದಲ್ಲಿ ನಿಪಿ–**4** ರಂತೆ ಮಹಜರ್ ನ್ನು ಬೆಳಿಗ್ಗೆ **7–00** ರಿಂದ **8–15** ರ ವರೆಗೆ ಮಾಡಿ. ಸದರಿ ಮಹಜರ್ ಚಾಸ–**44** ರವರು ಟೈಪ್ ಮಾಡಿರುತ್ತಾರೆ. ಆ ಸಮಯದಲ್ಲಿ ನಿಪಿ–**5** ರಿಂದ **7** ರಂತೆ ಪೋಟೋ ತೆಗೆಯಲಾಗಿರುತ್ತದೆ. ನಿಪಿ–**4** ರಲ್ಲಿ ಸಾಕ್ಷಿಯನ್ನು ನಿಪಿ–**4**(ಬಿ) ಎಂದು, ಚಾಸ–**44** ರವರ ಸಹಿಯನ್ನು ನಿಪಿ–**4**(ಸಿ) ಎಂದು, ಆರೋಪಿತನ ಸಹಿಯನ್ನು ನಿಪಿ–**4**(ಡಿ) ಎಂದು ಗುರುತಿಸಲಾಗಿದೆ. ನಂತರ ಪಿ ಎಫ್ ನಂಬರ್ **12/2023** ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಮು ಮಾ **14** ರಿಂದ **17** ರ ಮೇಲೆ ಇರುವ ಲಕೋಟೆಯಲ್ಲಿನ ಸಹಿಗಳನ್ನು ಕ್ರಮವಾಗಿ ಮು ಮಾ **14**(ಎ) ರಿಂದ **17** (ಎ) ಎಂದು ಗುರುತಿಸಲಾಗಿದೆ.

**3.** ಆರೋಪಿತನ ಆತನ ಜೊತೆಯಲ್ಲಿ ಬಂದಲ್ಲಿ ಕೃತ್ಯ ಬಳಸಿದ ಚಾಕುವನ್ನು ಹಾಜರುಪಡಿಸುವುದಾಗಿ ತಿಳಿಸಿದ್ದು, ಸಂಬಂಧಪಟ್ಟ ಹೇಳಿಕೆಯ ಭಾಗವನ್ನು ನಿಪಿ–**42** ಎಂದು, ಸಾಕ್ಷಿಯ ಸಹಿಯನ್ನು ನಿಪಿ–**42**(ಎ) ಎಂದು, ಆರೋಪಿಯ ಸಹಿಯನ್ನು ನಿಪಿ–**42**(ಬಿ) ಎಂದು ಗುರುತಿಸಲಾಗಿದೆ.

**4.** ಅದೇ ದಿವಸ ಯಲಹಂಕ ಆಸ್ಪತ್ರೆಗೆ ಬೇಟಿ ನೀಡಿ ಪಂಚರಾದ ಚಾಸ–**21** ರಿಂದ **23** ರವರನ್ನು ಹಾಜರುಪಡಿಸಿಕೊಂಡು ನಿಪಿ–**14** ರಂತೆ ಶವ ತನಿಖೆಯನ್ನು ಬೆಳಿಗ್ಗೆ **9–00** ರಿಂದ **12–00** ಗಂಟೆಯ ವರೆಗೆ

ಜರುಗಿಸಿರುತ್ತೇನೆ. ನಿಪಿ–**14** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**14**(ಬಿ) ಎಂದು, ಪಂಚರ ನೋಟಿಸ್ ನಿಪಿ–**15** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**15** (ಬಿ) ಎಂದು ಗುರುತಿಸಲಾಗಿದೆ. ಅದೇ ದಿವಸ ಆರೋಪಿಯನ್ನು ದಸ್ತಗಿರಿ ಮಾಡಿರುತ್ತೇನೆ ಆರೋಪಿಯನ್ನು ಪರಿಶೀಲಿಸಿದ್ದಾಗ ಬಲಗೈಗೆ ರಕ್ತದ ಗಾಯ ಆಗಿತ್ತು. ಸದರಿಯವರಿಗೆ ವೈದ್ಯಕೀಯ ತಪಾಷಣೆ ಮಾಡಿಸಿಕೊಂಡು ರೀಮಾಂಡ್ ಅರ್ಜಿಯೊಂದಿಗೆ ಸಿಬ್ಬಂದಿ ಮುಖಾಂತರ ನ್ಯಾಯಾಲಯಕ್ಕೆ ಹಾಜರಪಡಿಸಿ ಪಿ.ಸಿ ಕಸ್ಟಡಿ ಪಡೆದುಕೊಂಡು ಠಾಣೆಗೆ ಮರಳಿ, ಶವ ತನಿಖಾ ಕಾಲದಲ್ಲಿ ಮೃತಳ ಮೈ ಮೇಲೆ ಇದ್ದಂತಹ ವಸ್ತುಗಳು ಮು ಮಾ **18** ರಿಂದ **23** ಗಳನ್ನು ಪಂಚರ ಸಮಕ್ಷಮ ಮುಖಾಂತರ ಚಾಸ–**38** ರವರು ಹಾಜರುಪಡಿಸಿದ್ದು, ಚಾಸ–**11** ಮತ್ತು **12** ರವರ ಸಮಕ್ಷಮ ನಿಪಿ–**9** ರಂತೆ ಠಾಣಾ ಅವರಣದಲ್ಲಿ ಸಂಜೆ **7–30** ರಿಂದ **8–15** ರವರೆಗೆ ಮಾಡಿ. ಸದರಿ ಮಹಜರ್ ನ್ನು ಚಾಸ–**44** ರವರು ಟೈಪ್ ಮಾಡಿ ಪೋಟೋ ತೆಗೆಲಾಗಿರುತ್ತದೆ. ನಿಪಿ–**9** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**9**(ಬಿ) ಎಂದು, ಚಾಸ–**44** ರವರ ಸಹಿಯನ್ನು ನಿಪಿ–**9**(ಸಿ) ಎಂದು ಗುರುತಿಸಲಾಗಿದೆ. ಚಾಸ–**38** ರವರ ಸಹಿಯನ್ನು ನಿಪಿ–**9**(ಡಿ) ಎಂದು ಗುರುತಿಸಲಾಗಿದೆ. ಮು ಮಾ **18** ರಿಂದ **23** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**18**(ಎ) ರಿಂದ ನಿಪಿ–**23**(ಎ) ಎಂದು ಗುರುತಿಸಲಾಗಿರುತ್ತದೆ. ಆ ಸಮಯದಲ್ಲಿ ತೆಗೆದಂತಹ ಪೋಟೋ ನಿಪಿ–**10** ರಂತೆ ಇರುತ್ತದೆ. ಸದರಿ ಮು ಮಾ ಗಳನ್ನು ಪಿ ಎಫ್ ನಂಬರ್ **14/2023** ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಪಂಚರ ನೋಟಿಸ್ ನಿಪಿ–**8** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**8**(ಬಿ) ಎಂದು ಗುರುತಿಸಲಾಗಿದೆ.

**5.** ಚಾಸ–**2** ಹಾಗೂ **3, 4** ರವರಗಳ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿನಾಂಕ **19.03.2023** ರಂದು ಚಾಸ–**18, 17, 19, 20** ರವರ ಹೇಳಿಕೆ ಮಾಡಿಕೊಂಡಿರುತ್ತೇನೆ. ದಿನಾಂಕ **20.01.2023** ರಂದು ಆರೋಪಿ ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು, ಬರಗೆಂಡೀ ಲೇಔಟ್ **4** ಪೇಸ್ ಹೋಗಿ ಚಾಸ–**7** ಮತ್ತು **8** ರವರಿಗೆ ನೋಟಿಸ್ ನೀಡಿ ಬರ ಮಾಡಿಕೊಂಡು ಸದರಿಯವರಿಗೆ ನಿಪಿ–**40** ರಂತೆ ನೋಟಿಸ್ ಜಾರಿ ಮಾಡಿದ್ದು, ಬರಗಂಡೀ ಲೇಔಟ್ ನಲ್ಲಿ ಸ್ಥಳ ಮಹಜರ್ ಮಾಡಿದ ನಂತರ ಸದರಿಯವರ ಹೇಳಿಕೆಯ ಮೇರೆಗೆ ಮುಂದುವರೆದು ಸ್ಟಿಲ್ ಚಾಕು ಇಡುವ ಪ್ಲಾಸ್ಟಿಕ್ ಕವರ್ ಮುಮಾ **27** ಎಂದು, ಅದರ ಹಿಂದೆ ಚಾಕುವಿನ ಕಂಪನಿಯ ಹೆಸರು ಪಾಲಿಗಾರ್ಡ್ ಮು ಮಾ **28** ಇವುಗಳನ್ನು ಆರೋಪಿ ತೋರಿಸಿದ್ದು ಜಪ್ತಿ ಮಾಡಿಕೊಂಡು ಸ್ಥಳದಲ್ಲಿ ನಿಪಿ–**34** ರಂತೆ ಮಹಜರ್ ನ್ನು ಮಧ್ಯಾಹ್ನ **3–00** ರಿಂದ **5–00** ಗಂಟೆಯ ವರೆಗೆ ಮಾಡಿ ಚಾಸ–**44** ಟೈಪ್ ಮಾಡಿ ಪೋಟೋ ತೆಗೆಯಲಾಗಿರುತ್ತದೆ. **2** ಕಡೆ ಮಹಜರ್ ಗಳನ್ನು ನಿಪಿ–**34** ರಲ್ಲೆಯೇ ಮಾಡಲಾಗಿರುತ್ತದೆ. ನಿಪಿ–**34** ರಲ್ಲಿ

ಸಾಕ್ಷಿಯ ಸಹಿಯನ್ನು ನಿಪಿ–**34**(ಬಿ) ಎಂದು, ಚಾಸ–**44** ರವರ ಸಹಿಯನ್ನು ನಿಪಿ–**44** (ಸಿ) ಎಂದು, ಆರೋಪಿತನ ಸಹಿಯನ್ನು ನಿಪಿ–**34**(ಡಿ) ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಫೋಟೋ ನಿಪಿ–**35** ಮತ್ತು ನಿಪಿ–**36** ರಂತೆ ಇರುತ್ತದೆ. ನಂತರ ಠಾಣೆಗೆ ಮರಳಿ ಪಿ ಎಫ್ ನಂಬರ್ **16/2023** ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ನಿಪಿ–**40** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**40**(ಬಿ) ಎಂದು ಗುರುತಿಸಲಾಯಿತು.

**6.** ಅದೇ ದಿವಸ ಆರೋಪಿ ಚಾಕುವನ್ನು ಖರೀದಿ ಮಾಡಿದ ಸ್ಥಳ ತೋರಿಸುವುದಾಗಿ ತಿಳಿಸಿದ ಮೇರೆಗೆ ಚಾಸ–**7** ಮತ್ತು **8** ರವರನ್ನು ಹಾಜರಿದ್ದವರನ್ನು ಸಿಂಗನಾಯಕನಹಳ್ಳಿ ಗ್ರಾಮದ ಬಳಿ ಇರುವ ಕಾಲಬೈರವ ಆರ್ಕಿಡ್ ನಲ್ಲಿರುವ ದಾ ಬಿಗ್ ಮಾರ್ಕೇಟ್ ಅಲ್ಲಿ **1**ನೇ ಮಹಡಿಯಿಂದ ಚಾಕು ಖರೀದಿ ಮಾಡಿದ್ದು ತೋರಿಸಿದ ಸ್ಥಳದಲ್ಲಿ ಮಹಜರ್ ಮಾಡಲಾಯಿತು. ಆ ಸಮಯದಲ್ಲಿ ಸದರಿ ಅಂಗಡಿಯ ಮ್ಯಾನೇಜರ್ ಶ್ರೀರಾಮ್ ಚಾಸ–**26** ರವರಿಗೆ ನೋಟಿಸ್ ಜಾರಿ ಮಾಡಿ ಸದರಿ ಸಮಯದ ಸಿ ಸಿ ಟಿ ವಿ ಕ್ಯಾಮೆರಾ ಫುಟೇಜ್ ಕೊಡುವಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ. ಸದರಿ ಅಂಗಡಿಯಲ್ಲಿ ನಿಪಿ–**37** ರಂತೆ ಮಹಜರ್ ನ್ನು ಸಂಜೆ **5–30** ರಿಂದ **6–30** ಗಂಟೆಯ ವರೆಗೆ ಮಾಡಿ ಚಾಸ–**44** ಟೈಪ್ ಮಾಡಿ ಫೋಟೋ ತೆಗೆಯಲಾಗಿರುತ್ತದೆ. ನಿಪಿ–**37** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**37**(ಬಿ) ಎಂದು, ಚಾಸ–**44** ರವರ ಸಹಿಯನ್ನು ನಿಪಿ–**37** (ಸಿ) ಎಂದು, ಆರೋಪಿತನ ಸಹಿಯನ್ನು ನಿಪಿ–**37**(ಡಿ) ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಫೋಟೋಗಳು ನಿಪಿ–**38** ಮತ್ತು ನಿಪಿ–**39** ರಂತೆ ಇರುತ್ತದೆ.

**7.** ದಿನಾಂಕ **21.01.2023** ರಂದು ಮೃತಳ ಪಿ.ಎಂ ವರದಿಯನ್ನು ನಿಪಿ–**29** ರಂತೆ ವೈದ್ಯಾಧಿಕಾರಿಯಿಂದ ಠಾಣಾ ಸಿಬ್ಬಂದಿ ಪಡೆದುಕೊಂಡು ಆ ಸಮಯದಲ್ಲಿ ಮೃತಳ ರಕ್ತದ ಸಾಂಪಲ್ ವೈದ್ಯರಿಂದ ಸ್ವೀಕರಿಸಿಕೊಂಡು ಹಾಜರುಪಡಿಸಿದ್ದು. ಅದನ್ನು ಪಿ ಎಫ್ ನಂಬರ್ **17/2023** ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ನಿಪಿ–**29** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**29** (ಬಿ) ಎಂದು ಗುರುತಿಸಲಾಗಿದೆ. ಅದೇ ದಿವಸ ಚಾಸ–**31** ರವರಿಗೆ ಕೃತ್ಯ ನಡೆದ ಸ್ಥಳದ ನಕಾಶೆ ತಯಾರು ಮಾಡಿಕೊಡುವಂತೆ ಮನವಿ ಸಲ್ಲಿಸಿದ್ದು, ಸ್ಕಚ್ ಗಳನ್ನು ದಿನಾಂಕ **23.03.2023** ರಂದು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದು, ಅವುಗಳನ್ನು ಕ್ರಮವಾಗಿ ನಿಪಿ–**43** ಮತ್ತು **44** ಎಂದು ಗುರುತಿಸಲಾಗಿದ್ದು. ನಾನು ಸ್ವೀಕರಿಸಿದ ಪತ್ರ ನಿಪಿ–**45** ಎಂದು, ಸಾಕ್ಷಿಯ ಸಹಿಯನ್ನು ನಿಪಿ–**45**(ಎ) ಎಂದು ಗುರುತಿಸಲಾಗಿದೆ. ಚಾಸ–**30** ರವರಿಗೆ ಜಮೀನಿನ ಪತ್ರಗಳನ್ನು ನೀಡುವಂತೆ

ಮನವಿ ಪತ್ರ ಸಲ್ಲಿಸಿದ್ದು, ಅದರಂತೆ ಅವರು ದಿನಾಂಕ **24.03.2023** ರಂದು ಅಸಸ್ ಮೆಂಟ್ ಎಕ್ಸಟ್ರ್ಯಾಕ್ಟ್, ಆರ್ ಟಿ ಸಿ, ಎಂ ಆರ್ ಎಕ್ಸಟ್ರ್ಯಾಕ್ಟ್, ಜಾಡಿ ದೃಡೀಕರಣ ಇವುಗಳನ್ನು ಪತ್ರದೊಂದಿಗೆ ಲಗತ್ತಿಸಿ ನೀಡಿದ್ದು, ಸಂಪೂರ್ಣ ದಾಖಲೆಗಳನ್ನು ಒಟ್ಟಾಗಿ ನಿಪಿ–**46** ಎಂದು, ನಾನು ಸ್ವೀಕರಿಸಿದ ಪತ್ರ ನಿಪಿ–**47** ಎಂದು, ಸಾಕ್ಷಿಯ ಸಹಿಯನ್ನು ನಿಪಿ–**47**(ಎ) ಎಂದು ಗುರುತಿಸಲಾಗಿದೆ. ಸದರಿ ದಾಖಲೆಗಳಲ್ಲಿ ಜಮೀನು ಬರಗಂಡಿ ಲೇಔಟ್‌ನಲ್ಲಿ ಇರುವುದಾಗಿ ನಮೂದು ಆಗಿರುತ್ತದೆ. ಮಾಲೀಕ ಬೈರೇಗೌಡ ಆಗಿರುತ್ತಾರೆ.

**8**. ಅದೇ ದಿವಸ ಆರೋಪಿಯ ರಕ್ತದ ಗುಂಪನ್ನು ಪರಿಶೀಕ್ಷಿಸಿ ನೀಡುವಂತೆ ರಾಜಾನುಕುಂಟೇ ಚಿಗುರು ಆಸ್ಪತ್ರೆಗೆ ಮನವಿ ಪತ್ರ ಸಲ್ಲಿಸಿದ್ದು, ವೈದ್ಯರು ಆರೋಪಿಯ ರಕ್ತ ಗುಂಪು ಎಬಿ ಪಾಸಿಟವ್ ಎಂದು ನೀಡಿದ್ದು, ಸದರಿ ದಾಖಲೆಯನ್ನು ನಿಪಿ–**48** ಎಂದು, ಸಾಕ್ಷಿಯ ಸಹಿಯನ್ನು ನಿಪಿ–**48**(ಎ) ಎಂದು ಗುರತಿಸಲಾಗಿರುತ್ತದೆ. ಮನವಿ ಪತ್ರವನ್ನು ನಿಪಿ–**49** ಎಂದು, ಸಾಕ್ಷಿಯ ಸಹಿಯನ್ನು ನಿಪಿ–**49**(ಎ) ಎಂದು ಗುರುಸಲಾಗಿದೆ.

**9**. ದಿನಾಂಕ **22.01.2023** ರಂದು ಆರೋಪಿತನ ಬಲ ಕೈನಲ್ಲಿ ಆದಂತಹ ಗಾಯಕ್ಕೆ ಚಿಕಿತ್ಸೆ ನೀಡುವ ಬಗ್ಗೆ ವೈದ್ಯಾಧಿಕಾರಿಗೆ ನೀಡಿರುವ ಮನವಿ ಪತ್ರವನ್ನು ನಿಪಿ–**50** ಎಂದು, ಸಾಕ್ಷಿಯ ಸಹಿಯನ್ನು ನಿಪಿ–**50**(ಎ) ಎಂದು, ತಪಾಷಣೆ ಮಾಡಿದ ನಂತರ ವೈದ್ಯರು ನೀಡಿರುವ ಓ ಪಿ ರೆಕಾರ್ಡ್ ನ್ನು ನಿಪಿ–**51** ಎಂದು ಗುರುತಿಸಲಾಗಿದೆ.

**10**. ಪಿ.ಸಿ ಕಸ್ಟಡಿ ತನಿಖೆ ಪೂರ್ಣಗೊಂಡ ನಂತರ ವೈದ್ಯಕೀಯ ತಪಾಷಣೆ ಮಾಡಿ ದಸ್ತಗಿರಿ ನಿಯಮ ಪಾಲಿಸಿ ಸಿಬ್ಬಂದಿಯೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ದಿನಾಂಕ **30.01.2023** ರಂದು ತನಿಖಾ ಕಾಲದಲ್ಲಿ ಅಮಾನತ್ತುಪಡಿಸಿಕೊಂಡ ಪಿ.ಎಫ್ ನಂಬರ್ **11/2023, 12/2023** ರಲ್ಲಿ ಬಟ್ಟೆಗಳು, **14/2023** ಮೃತಳ ಬಟ್ಟೆಗಳು ಮತ್ತು **17/2023** ಮೃತಳ ರಕ್ತ ಇವುಗಳನ್ನು ಠಾಣಾ ಸಿಬ್ಬಂದಿಯೊಂದಿಗೆ ಎಫ್ ಎಸ್ ಎಲ್ ಕಳುಹಿಸಿಕೊಟ್ಟಿದ್ದು, ಸದರಿಯವರು ಹಾಜರುಪಡಿಸಿದಂತಹ ಸ್ವೀಕೃತಿಯನ್ನು ನೋಡುತ್ತಿದ್ದು, ಅದನ್ನು ನಿಪಿ–**52** ಎಂದು, ಸಾಕ್ಷಿಯ ಸಹಿಯನ್ನು ನಿಪಿ–**52**(ಎ) ಎಂದು ಗುರುತಿಸಲಾಗಿದೆ.

**11**. ದಿನಾಂಕ **31.01.2023** ಪಿ ಎಫ್ ನಂಬರ್ **12/2023** ವಶಪಡಿಸಿಕೊಂಡಿದಂತಹ ಆರೋಪಿ ಹಾಗೂ ಮೃತಳ ಮೊಬೈಲ್ ಪೋನ್‌ಗಳನ್ನು ಸೇನ್ ಪೋಲಿಸ್ ಠಾಣೆಗೆ ನೀಡವ ಸಮಯದಲ್ಲಿ ಪಂಚರಾದ ಚಾಸ–**13** ಮತ್ತು **14**

ರವರ ಮುಖಾಂತರ ಸದರಿ ಠಾಣೆಯಲ್ಲಿ ನಿಪಿ–**24** ರಂತೆ ಮಹಜರ್ ನ್ನು ಸಂಜೆ **6–30** ರಿಂದ **7–15** ರವರೆಗೆ ಮಾಡಿ ಪೋಟೋ ತೆಗೆಯಲಾಗಿರುತ್ತದೆ. ಪಂಚರಿಗೆ ನೀಡಿದ ನೋಟಿಸ್ ನಿಪಿ–**27** ರಲ್ಲಿ, ಸಾಕ್ಷಿಯ ಸಹಿಯನ್ನು ನಿಪಿ–**27**(ಬಿ) ಎಂದು, ನಿಪಿ–**24** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**24**(ಬಿ) ಎಂದು, ಚಾಸ–**44** ರವರ ಸಹಿಯನ್ನು ನಿಪಿ–**24**(ಸಿ) ಎಂದು, ಸದರಿ ಸಮಯದಲ್ಲಿ ತೆಗೆದಂತಹ ಪೋಟೋಗಳನ್ನು ನಿಪಿ–**25** ಮತ್ತು **26** ಎಂದು ಗುರುತಿಸಲಾಗಿದೆ. ಸದರಿ ಮೊಬೈಲ್‌ಗಳನ್ನು ಈಗಾಗಲೇ ಮು ಮಾ **14** ಮತ್ತು **15** ಎಂದು ಗುರುತಿಸಲಾಗಿರುತ್ತದೆ.

**12**. ದಿನಾಂಕ **02.02.2023** ರಂದು ತನಿಖೆ ಸಮಯದಲ್ಲಿ ತೆಗೆದಂತಹ ಪೋಟೋಗಳಿಗೆ ಸಂಬಂಧಪಟ್ಟಂತೆ ನಿಪಿ–**19**, **65**(ಬಿ) ಪ್ರಮಾಣ ಪತ್ರ ಚಾಸ–**26** ರವರು ನೀಡಿದ್ದು, ನಿಪಿ–**19** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**19**(ಬಿ) ಎಂದು, ನಿಪಿ–**23**, **65**(ಬಿ) ಪ್ರಮಾಣ ಪತ್ರ ಚಾಸ–**29** ರವರು ನೀಡಿದ್ದು, ನಿಪಿ–**23** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**23**(ಬಿ) ಎಂದು ಗುರುತಿಸಲಾಗಿದೆ. ಠಾಣಾ ಸಿಬ್ಬಂದಿಯವರು ತೆಗೆದಂತಹ ಪೋಟೋಗಳಿಗೆ ಸಂಬಂಧಪಟ್ಟಂತೆ **65**(ಬಿ) ಪ್ರಮಾಣ ಪತ್ರಗಳನ್ನು ನೀಡಿದ್ದು,ಅವುಗಳನ್ನು ಕ್ರಮವಾಗಿ ನಿಪಿ–**53** ಮತ್ತು ನಿಪಿ–**54** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ–**53**(ಎ) ಮತ್ತು ನಿಪಿ–**54**(ಎ) ಎಂದು ಗುರುತಿಸಲಾಗಿರುತ್ತದೆ.

**13**. ದಿನಾಂಕ **03.02.2023** ಚಾಸ–**26** ರವರು ಠಾಣೆಗೆ ಹಾಜರಾಗಿ ದಿನಾಂಕ **17.01.2023** ರಂದು ಆರೋಪಿ ಅವರ ಅಂಗಡಿಯಲ್ಲಿ ಚಾಕು ಖರೀದಿಸಿರುವ ಸಿ ಸಿ ಕ್ಯಾಮಾರ ಪುಟೇಜ್‌ನ್ನು ಪೆನ್ ಡ್ರೈವ್‌ನಲ್ಲಿ ಹಾಕಿ ಕೊಟ್ಟಿದ್ದು, ಚಾಕುವಿನ ಬಿಲ್ ನಿಪಿ–**18** ರಂತೆ ನೀಡಿದ್ದು, ಅದನ್ನು ಠಾಣೆಯಲ್ಲಿ ಸ್ವೀಕರಿಸಿ ಪಂಚರಾದ ಚಾಸ–**15, 16** ಮತ್ತು **26** ರವರ ಸಮಕ್ಷಮ ನಿಪಿ–**11** ರಂತೆ ಮಹಜರ್ ನ್ನು ಮಧ್ಯಾಹ್ನ **2–30** ರಿಂದ **3–45** ರ ವರೆಗೆ ಮಾಡಿ ಚಾಸ–**43** ರವರು ಟೈಪ್ ಮಾಡಿ ಪೋಟೋ ತೆಗೆಯಲಾಗಿರುತ್ತದೆ. ನಿಪಿ–**11** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**11**(ಬಿ) ಎಂದು, ಚಾಸ–**43** ರವರ ಸಹಿಯನ್ನು ನಿಪಿ–**11**(ಸಿ) ಎಂದು ಗುರುತಿಸಲಾಗಿರುತ್ತದೆ. ಬಿಗ್ ಮಾರ್ಕೆಟ್ ಬಿಲ್ ನಿಪಿ–**18** ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಆ ಸಮಯದಲ್ಲಿ ತೆಗೆದಂತಹ ಪೋಟೋ ನಿಪಿ–**12** ರಂತೆ ಇರುತ್ತದೆ. ಪೆನ್ ಡ್ರೈವ್ ಮು ಮಾ **24** ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಕೃತ್ಯ ನಡೆದ ದಿನದಂದು ಆರೋಪಿ ಸದರಿ ಬಿಗ್ ಮಾರ್ಕೆಟ್ ನಲ್ಲಿ ಚಾಕು ಖರೀದಿ ಮಾಡಿರುವುದು ಪೆನ್ ಡ್ರೈವ್ ನಲ್ಲಿರುತ್ತದೆ. ಮು ಮಾ

**24** ರ ಚೀಲದ ಮೇಲೆ ಸಾಕ್ಷಿಯ ಸಹಿಯನ್ನು ಮು ಮಾ **24**(ಎ) ಎಂದು ಗುರುತಿಸಲಾಗಿದೆ. ಸದರಿ ಪಂಚರಿಗೆ ನೀಡಿರುವ ನೋಟಿಸ್ ನಿಪಿ–**55** ಎಂದು, ಸಾಕ್ಷಿಯ ಸಹಿಯನ್ನು ನಿಪಿ–**55**(ಎ) ಎಂದು ಗುರುತಿಸಲಾಗಿದೆ. ಅದೇ ದಿವಸ ಮೊಬೈಲ್‌ಗಳನ್ನು ಎಫ್ ಎಸ್ ಎಲ್ ಗೆ ಕಳುಹಿಸಿಕೊಟ್ಟಿದ್ದು, ಹಾಜರು ಮಾಡಿ ಸ್ವೀಕೃತಿ ನೀಡಿದ್ದು, ಅದನ್ನು ನಿಪಿ–**56** ಎಂದು, ಸಾಕ್ಷಿಯ ಸಹಿಯನ್ನು ನಿಪಿ–**56**(ಎ) ಎಂದು ಗುರುತಿಸಲಾಗಿದೆ. ಅದೇ ದಿವಸ ಸಿಬ್ಬಂದಿಯಾದ ಚಾಸ–**43** ಮತ್ತು **44** ರವರ ಹೇಳಿಕೆ ಪಡೆದುಕೊಂಡಿರುತ್ತೇನೆ.

**14**. ದಿನಾಂಕ **11.02.2023** ರಂದು ಬೈರೇಗೌಡ ಚಾಸ–**25** ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿನಾಂಕ **13.02.2023** ರಂದು ಪೆನ್ ಡ್ರೈವ್ ಎಫ್ ಎಸ್ ಎಲ್ ಗೆ ಕಳುಹಿಸಿಕೊಟ್ಟಿದ್ದು, ಹಾಜರು ಮಾಡಿ ಸ್ವೀಕೃತಿ ನೀಡಿದ್ದು, ಅದನ್ನು ನಿಪಿ–**57** ಎಂದು, ಸಾಕ್ಷಿಯ ಸಹಿಯನ್ನು ನಿಪಿ–**57**(ಎ) ಎಂದು ಗುರುತಿಸಲಾಗಿದೆ. ದಿನಾಂಕ **12.02.2023** ರಂದು ಏರ್ ಟೇಲ್ ನೂಡಲ್ ಅಧಿಕಾರಿಗೆ ಆರೋಪಿ ಮೊಬೈಲ್‌ನ ಸಿ ಡಿ ಆರ್ ನ್ನು ನೀಡವಂತೆ ಮನವಿ ಪತ್ರ ಸಲ್ಲಿಸಿದ್ದು, ಸದರಿಯವರು ದಿನಾಂಕ **13.02.2023** ರಂದು ಸಿ ಡಿ ಆರ್ ಯೊಂದಿಗೆ **65**(ಬಿ) ಪ್ರಮಾಣ ಪತ್ರ ನೀಡಿದ್ದು, ಸಿ ಡಿ ಆರ್ ನ್ನು ನಿಪಿ–**58** ಎಂದು, ಸಾಕ್ಷಿಯ ಸಹಿಯನ್ನು ನಿಪಿ–**58** (ಎ) ಎಂದು, **65**(ಬಿ) ಪ್ರಮಾಣ ಪತ್ರವನ್ನು ನಿಪಿ–**59** ಎಂದು, ಸಾಕ್ಷಿಯ ಸಹಿಯನ್ನು ನಿಪಿ–**59**(ಎ) ಎಂದು ಗುರುತಿಸಲಾಗಿದೆ. ನಿಪಿ–**58** ರಲ್ಲಿ ಕೊನೆಯ ನಂಬರ್ **253** ಆರೋಪಿ ಮೊಬೈಲ್‌ನಿಂದ ಕರೆಯನ್ನು ಮಧ್ಯಾಹ್ನ **15–10.59** ಸೆಕೆಂಡ್ ನಲ್ಲಿ ಹಾಗೂ **15–14.24** ಸೆಕೆಂಡ್ ಸಮಯದಲ್ಲಿ ಮಾಡಿರುವುದು ಟವರ್ ಲೊಕೇಷನ್ ನಲ್ಲಿ ಕಂಡುಬಂದಿದ್ದು, ಕೃತ್ಯ ನಡೆದ ಸಮಯದಲ್ಲಿ ಸ್ಥಳದಲ್ಲಿ ಇರುತ್ತಾನೆಂದು ಕಂಡು ಬರುತ್ತದೆ. ಸಂಬಂಧಪಟ್ಟ ಎಂಟ್ರಿಯನ್ನು ನಿಪಿ–**58**(ಬಿ) ಎಂದು ಗುರುತಿಸಲಾಗಿದೆ.

**15**. ರಿಲಾನ್ಸ್ ಜಿಯೋ ನಂಬರ್ ...**1919** ಗೆ ಸಂಬಂಧಪಟ್ಟಂತೆ ನೂಡಲ್ ಅಧಿಕಾರಿಗೆ ಮೃತಳ ಮೊಬೈಲ್‌ನ ಸಿ ಡಿ ಆರ್ ನ್ನು ನೀಡವಂತೆ ಮನವಿ ಪತ್ರ ಸಲ್ಲಿಸಿದ್ದು, ಸದರಿಯವರು ದಿನಾಂಕ **13.02.2023** ರಂದು ಸಿ ಡಿ ಆರ್ ನೀಡಿದ್ದು, ಸಿ ಡಿ ಆರ್ ನ್ನು ನಿಪಿ–**60** ಎಂದು, ಸದರಿ ಮೊಬೈಲ್‌ನಿಂದ ಕರೆಯನ್ನು ಮಧ್ಯಾಹ್ನ **15–44.53** ಸೆಕೆಂಡ್ ನಲ್ಲಿ ಹಾಗೂ **15–45.20** ಸೆಕೆಂಡ್ ಸಮಯದಲ್ಲಿ ಮಾಡಿರುವುದು ಟವರ್ ಲೊಕೇಷನ್ ನಲ್ಲಿ ಕಂಡುಬಂದಿದ್ದು, ಕೃತ್ಯ ನಡೆದ ಸಮಯದಲ್ಲಿ ಆರೋಪಿ ಜೇಬಿನಲ್ಲಿ ಇಟ್ಟಿಕೊಂಡಿದ್ದು, ಕಾಲ್ ರೇಕಾರ್ಡ್ ಆಗಿರುವುದು ಕಂಡು ಬರುತ್ತದೆ. ಸಂಬಂಧಪಟ್ಟ ಎಂಟ್ರಿಯನ್ನು ನಿಪಿ–**60**(ಎ) ಎಂದು ಗುರುತಿಸಲಾಗಿದೆ.

**16.** ದಿನಾಂಕ **23.03.2023** ರಂದು ಚಿಗುರು ಆಸ್ಪತ್ರೆಯಿಂದ ಆರೋಪಿಯ ಗಾಯದ ಪ್ರಮಾಣ ಪತ್ರ ಪಡೆದುಕೊಂಡಿದ್ದು, ನಿಪಿ–**28** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**28**(ಬಿ) ಎಂದು ಗುರುತಿಸಲಾಗಿರುತ್ತದೆ. ನಿಪಿ–**3** ಪೋಲಿಸ್ ನೋಟಿಸ್ ನಲ್ಲಿ ಸಾಕ್ಷಿಯ ಸಹಿಯನ್ನು ನಿಪಿ–**3**(ಬಿ) ಎಂದು ಗುರುಸಲಾಯಿತು. ಸೆನ್ ಠಾಣೆಯಿಂದ ನೀಡಿರುವ ಎಕ್ಸಟ್ರಾಕ್ಸನ್ ರೀಪೊರ್ಟ್ ನಿಪಿ–**61** ಎಂದು, ಸಾಕ್ಷಿಯ ಸಹಿಯನ್ನು ನಿಪಿ–**61**(ಎ) ಎಂದು, ಮೃತಳ ಪೋಟೋಗಳನ್ನು ಕ್ರಮವಾಗಿ ಕೃತ್ಯ ನಡೆದ ಸ್ಥಳದಲ್ಲಿ ತೆಗೆದಿದ್ದು, ಅವುಗಳನ್ನು ಒಟ್ಟಾಗಿ ನಿಪಿ–**62** ಎಂದು ಗುರುತಿಸಲಾಗಿದೆ. **2** ಸಿ ಡಿ ಯನ್ನು ಒಟ್ಟಾಗಿ ನಿಪಿ–**63** ಎಂದು ಗುರುತಿಸಲಾಗಿದೆ. ಕೃತ್ಯ ನಡೆದ ಸ್ಥಳದಲ್ಲಿ ದೊರತ ಚಾಕು ಮತ್ತು ಕೂಡುಗೋಲು ಪೋಟೋಗಳು ನಿಪಿ–**64** ಮತ್ತು **65** ಎಂದು ಗುರುತಿಸಲಾಗಿರುತ್ತದೆ. ದಿನಾಂಕ **27.03.2023** ರಂದು ಎಫ್ ಎಲ್ ಎಸ್ ವರದಿಯನ್ನು ಕಾಯ್ದಿರಿಸಿ. ನಂತರ ಆರೋಪಿತನ ವಿರುದ್ಧ ಸಾಕಷ್ಟು ಸಾಕ್ಷ್ಯದಾರಗಳು ಕಂಡುಬಂದಿದ್ದರಿಂದ ದೋಷರೊಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಪಾಟೀ ಸವಾಲು ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲಿಗೆ ಸಮಯ ಅವಕಾಶ ನೀಡಲಾಗಿದೆ

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ